ಪರಾಕಾಷ್ಠೆಯಲ್ಲಿತ್ತು. ನಾನು ಬರೆಯಲು ತೊಡಗಿದ್ದು ಅದರ ಪ್ರಭಾವದಲ್ಲಿಯೇ. ಆದರೆ ನನ್ನ ಬ್ಯಾಂಕ್ ಉದ್ಯೋಗ ಸಾಹಿತ್ಯದಲ್ಲಿ ಹೆಚ್ಚು ತೊಡಗಿಸಿಕೊಳ್ಳಲು ಬಿಡುತ್ತಿರಲಿಲ್ಲ. ಆಗಲೇ ಕಾದಂಬರಿ ಬರವಣಿಗೆಯಲ್ಲಿಯೂ ತೊಡಗಿಕೊಂಡಿದ್ದರಿಂದ ಉಳಿದ ಪ್ರಕಾರಗಳಲ್ಲಿ ಹೆಚ್ಚು ಬರೆಯಲು ಸಾಧ್ಯವಾಗಲಿಲ್ಲ' ಎನ್ನುತ್ತಲೇ ತಮ್ಮ ಕಾದಂಬರಿ 'ಸ್ವಪ್ನ ಸಾರಸ್ವತ'ಕ್ಕೆ ಸಾಹಿತ್ಯಲೋಕದಲ್ಲಿ ಸಿಕ್ಕ ಮನ್ನಣೆಯನ್ನು ನೆನಪಿಸಿಕೊಂಡರು. 'ನನ್ನ ಕಾದಂಬರಿ ಬರೆದು ಆಗಲೇ ಐದು ವರ್ಷ ಆಗಿತ್ತು. ಆದರೆ ಐದು ವರ್ಷಗಳ ಹಿಂದೆಯೇ ಅದನ್ನು ಪ್ರಕಟಿಸಿದ್ದರೆ ಇಷ್ಟು ಜನಪ್ರಿಯ ಆಗುತ್ತಿರಲಿಲ್ಲವೇನೋ ಅಂತ ನನಗೆ ಅನುಮಾನ ಇದೆ. ಯಾಕೆಂದರೆ ಇದು ಪ್ರಕಟವಾಗುವ ಸಮಯದಲ್ಲಿ ಹೆಚ್ಚಿನವರು ದೊಡ್ಡ ಕಾದಂಬರಿ ಬರೆಯುವುದನ್ನು ಬಿಟ್ಟಿದ್ದರು. ಅಂಥ ಅಭಾವದಲ್ಲಿ ನನ್ನ ಕಾದಂಬರಿ ಬಂತು. ಆದ್ದರಿಂದ ಸರಿಯಾದ ಸಮಯದಲ್ಲಿ ಪ್ರಕಟವಾಗಿ, ಸರಿಯಾದ ಜನರ ಕೈಗೆ ತಲುಪಿದ್ದರಿಂದ ಅದಕ್ಕೆ ಮನ್ನಣೆ ಸಿಕ್ಕಿತು. ಹಿರಿಯರು ಒಂದು ಕೃತಿಯನ್ನು ಓದಿ ಉಳಿದವರಿಗೆ ಹೇಳಿದಾಗ ಅದು ಹೆಚ್ಚು ಜನರಿಗೆ ಮುಟ್ಟುತ್ತದೆ. ಇಲ್ಲವಾದರೆ ಮೂಲೆಗೆ ಬೀಳಬಹುದು. ಅಥವಾ ಎಷ್ಟೋ ಸಮಯ ಆದಮೇಲೆ ಅದರ ಮೌಲ್ಯಮಾಪನ ಆಗಬಹುದು' ಎಂದು ಒಂದು ಸಾಹಿತ್ಯಕೃತಿ ಮುನ್ನೆಲೆಗೆ ಬರುವುದಕ್ಕೆ ಇರುವ ಹಲವು ಕಾರಣಗಳನ್ನೂ ವಿಶ್ಲೇಷಿಸಿದರು.

ಸಾಹಿತ್ಯದ ಜತೆಜತೆಗೇ ಸಿನಿಮಾದ ಜತೆಗೂ ಪೈ ತಮ್ಮ ಸಂಬಂಧವನ್ನು ಬೆಳೆಸಿಕೊಳ್ಳುತ್ತಲೇ

## ಗೋಪಾಲಕೃಷ್ಣ ಪೈ

ಕತೆಗಾರ, ಕಾದಂಬರಿಕಾರ ಹಾಗೂ ಅನುವಾದಕ ಗೋಪಾಲಕೃಷ್ಣ ಪೈ ಕಾಸರಗೋಡಿನ ಪೆರ್ಲದವರು.

ಪೈ ಅವರ ಮೊದಲ ಕಥಾ ಸಂಗ್ರಹ 'ತಿರುವು'. ಬಳಿಕ 'ಈ ಬೆರಳ ಗುರುತು', 'ಹಾರುವ ಹಕ್ಕಿಯ ಗೂಡಿನ ದಾರಿ' ಸಂಕಲನಗಳು ಪ್ರಕಟವಾಗಿವೆ. ಅವರ ಕಾದಂಬರಿ 'ಸ್ವಪ್ನ ಸಾರಸ್ವತ'. 'ಆಧುನಿಕ ಚೀನಿ ಸಣ್ಣಕತೆಗಳು', 'ಚೆಕೋವನ ಕೊನೆಯ ದಿನಗಳು', 'ಮೋಯಾನ್‌ನ ಕಥೆಗಳು', 'ಮಹಾತ್ಮನಿಗಾಗಿ ಕಾಯುತ್ತ' ಅವರ ಅನುವಾದಿತ ಪುಸ್ತಕಗಳು. 'ಕನಸೆಂಬೋ ಕುದುರೆಯನೇರಿ' ಸಿನಿಮಾಕ್ಕೆ ಚಿತ್ರಕತೆ ಬರೆದಿರುವ ಅವರು ಅದರ ಅತ್ಯುತ್ತಮ ಚಿತ್ರಕತೆಗಾಗಿ ಈ ಸಿನಿಮಾದ ನಿರ್ದೇಶಕ ಗಿರೀಶ ಕಾಸರವಳ್ಳಿ ಅವರೊಂದಿಗೆ ರಾಷ್ಟ್ರಪ್ರಶಸ್ತಿ ಪಡೆದುಕೊಂಡಿದ್ದಾರೆ.

